

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **100**

ಉತ್ತರಿಸಬೇಕಾದ ದಿನಾಂಕ : **15.09.2021**


ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕಾರವಾರ ಜಿಲ್ಲೆಯ ಜೋಯಿಡ ತಾಲೂಕಿನ ರಾಮನಗರದಲ್ಲಿ ಪಶು ಚಿಕಿತ್ಸ ವೈದ್ಯಾಧಿಕಾರಿ ಬಡವರಿಗೆ ಉಚಿತವಾಗಿ ಹಂಚಿಕೆ ಮಾಡಬೇಕಾದ ಕೋಳಿಮರಿಯನ್ನು ಒಂದಕ್ಕೆ ರೂ. 50/- ಮಾರಾಟ ಮಾಡಿ ಸಾವಿರಾರು ರೂಪಾಯಿ ಬಡವರಿಂದ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು.)	ಹೌದು.
ಆ)	ಈ ರೀತಿ ಅವ್ಯವಹಾರ ಮಾಡಿ ಕೋಳಿ ಮರಿ ಹಂಚಿಕೆಯಲ್ಲಿ ಹಣದ ದುರುಪಯೋಗ ಮಾಡಿರುವ ವೈದ್ಯಾಧಿಕಾರಿಗಳ ಮೇಲೆ ಇಲ್ಲಿಯವರೆಗೆ ಸರಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು).	ಉಪನಿರ್ದೇಶಕರು (ಆ), ಪಶುಪಾಲನಾ ಇಲಾಖೆ, ಕಾರವಾರ ಇವರು ದಿನಾಂಕ:10/03/2021ರಂದು ಪಶುಚಿಕಿತ್ಸಾಲಯ, ರಾಮನಗರ ಇಲ್ಲಿಗೆ ಭೇಟಿ ನೀಡಿ ಈ ಕುರಿತು ವಿಚಾರಿಸಿದ್ದು, ಫಲಾನುಭವಿಗಳಿಂದ ವಂತಿಗೆ ಪಡೆದಿರುವುದು ನಿಜವೆಂದು ತಿಳಿದ ಕಾರಣ ಇದಕ್ಕೆ ವಿವರಣೆಯನ್ನು ಪಡೆದಿರುತ್ತಾರೆ. ಸದರಿ ಪಶು ವೈದ್ಯಾಧಿಕಾರಿಗಳು ಉಚಿತವಾಗಿ ಕೋಳಿಮರಿಗಳನ್ನು ರೈತರಿಗೆ ನೀಡುವ ಬಗ್ಗೆ ಅವರಿಗೆ ಸರಿಯಾದ ಮಾಹಿತಿ ಇಲ್ಲದ್ದರಿಂದ ವಂತಿಗೆಯನ್ನು ಇಲಾಖೆಗೆ ಪಾವತಿ ಮಾಡಬೇಕಾಗುತ್ತದೆ ಎಂಬ ಉದ್ದೇಶದಿಂದ ಪಡೆಯಲಾಗಿತ್ತು ಎಂದು ತಿಳಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಫಲಾನುಭವಿಗಳಿಗೆ ಹಣವನ್ನು ಹಿಂದಿರುಗಿಸಲಾಗಿದೆ ಎಂದು ಸದರಿ ಪಶುವೈದ್ಯಾಧಿಕಾರಿಗಳು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. (ಅಧಿಕಾರಿಯವರ ಲಿಖಿತ ಹೇಳಿಕೆ ಹಾಗೂ ಹಣ ವಾಪಾಸ್ಸು ಪಡೆದ ರೈತರ ಸಹಿ ಇರುವ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)
ಇ)	ಈ ಬಗ್ಗೆ ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ಪಶು ವೈದ್ಯಾಧಿಕಾರಿಯವರು ರೈತರ ಹಣವನ್ನು ಹಿಂದಿರುಗಿಸಿರುವುದರಿಂದ ಸದರಿಯವರಿಗೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಪಸಂಮೀ ಇ-20 ಸಲೆವಿ 2021

(ಪ್ರಭು ಬಿ ಚವ್ಹಾಣ್)
ಪಶುಸಂಗೋಪನೆ ಸಚಿವರು

ಮಾಹಿತಿ ಹಕ್ಕು ಪ್ರ.ಸಂ 100ಕ್ಕೆ ಅನುಬಂಧ



ಮಾನ್ಯ ಉಪನಿರ್ದೇಶಕರು
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಉತ್ತರ ಕನ್ನಡ (ಜಿ).

ಉಚಿತವಾಗಿ ನೀಡಿರುವ ಕೋಳಿಮರಿಯನ್ನು ರಸ್ತೆಯ ಮಾರಾಟ ಮಾಡುತ್ತಿರುವ ಬಗ್ಗೆ ದೂರು ದಾಖಲಾಗಿದ್ದು, ಇದರ ಬಗ್ಗೆ ಸ್ಪಷ್ಟೀಕರಣ ನೀಡುತ್ತಿರುವ ಬಗ್ಗೆ.

ಮಾನ್ಯರೇ,

ದಿನಾಂಕ: 06/03/2020 ರ ಶುಕ್ರವಾರದಂದು ಬೆಳಿಗ್ಗೆ 11:30 ರ ಸಮಯ ಪಶುಚಿಕಿತ್ಸಾಲಯ, ರಾಮನಗರ ಇಲ್ಲಿಗೆ "ಅಸೀಲ್" ಕೋಳಿಮರಿಗಳನ್ನು ಸ[illegible] ಮಾಡಿದ್ದು ಇರುತ್ತದೆ. ಈ ಹಿಂದೆ 2018-19 ನೇ ಸಾಲಿನಲ್ಲಿ ಇಲಾಖೆ ವ[illegible] "ಗಿರಿರಾಜ" ಕೋಳಿಮರಿಗಳನ್ನು ಸರಬರಾಜು ಮಾಡಿದ್ದು, ಆಗಿನ ಮೇಲಾಧಿಕಾರಿಗಳ ನಿರ್ದೇಶನದಂತೆ ಶೇಕಡಾ 25% ರಷ್ಟು ವಂತಿಗೆಯನ್ನು ಫಲಾನುಭವಿಗಳಿಂದ ಪಡೆದು ವಿತರಿಸಲಾಗಿತ್ತು.

ಆದರೆ ಆವತ್ತು ದಿನದಂದು ಸರಬರಾಜು ಆದ ಕೋಳಿಮರಿಗಳು ಯಾವ [illegible] ಯಾವ ಯೋಜನೆಯಲ್ಲಿ ಹಾಗೂ ಎಷ್ಟು ವಂತಿಗೆ ಪಡೆದು ವಿತರಿಸಬೇಕು ಎಂದು ಮಾನ್ಯ ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಜೋಯಿಡಾ ಇವರಿಂದ ಯಾವುದೇ ನಿರ್ದೇಶನಗಳು ಬಂದಿರುವುದಿಲ್ಲ, ಹಾಗೂ ಫಲಾನುಭವಿಗಳ ಮಾಹಿತಿಯಲ್ಲಿ ಎಲ್ಲಿಯೂ ಸಹ ಉಚಿತವಾಗಿ ನೀಡಬೇಕೆಂದು ನಮೂದಿಸಿರುವುದಿಲ್ಲ.

ಆದ ಕಾರಣ ನಾನು ಫಲಾನುಭವಿಗಳಿಂದ ಶೇ 25% ವಂತಿಗೆ ಪಡೆದು ಮರಿಗಳನ್ನು ವಿತರಿಸಿರುವುದು ನಿಜ ಆಗಿರುತ್ತದೆ. ಒಂದು ವೇಳೆ ಸದರಿ ಯೋಜನೆಯಲ್ಲಿ ವಿತರಿಸಲಾದ ಕೋಳಿಮರಿಗಳನ್ನು ಉಚಿತವಾಗಿ ನೀಡಬೇಕೆಂದು ಇದ್ದರೆ ನನ್ನ ಬಳಿ [illegible] ಪಡೆದಿರುವ ಹಣವನ್ನು ಫಲಾನುಭವಿಗಳಿಗೆ ಹಿಂತಿರುಗಿ ಪಾವತಿಸುತ್ತೇನೆ ಎಂದು [illegible] ಮಾಹಿತಿ ಸ್ಪಷ್ಟೀಕರಿಸುತ್ತೇನೆ.

ಸ್ಥಳ: ರಾಮನಗರ
ದಿನಾಂಕ: 09/03/2020

(ಇಂತಿ ನಿಮ್ಮ ವಿಶ್ವಾಸಿ)
[signature]
ಪಶು ವೈದ್ಯಾಧಿಕಾರಿಗಳು
ಪಶು ಚಿಕಿತ್ಸಾಲಯ ರಾಮನಗರ
ಜೋಯಿಡಾ (ತಾ)

ಪ್ರತಿಯನ್ನು :-
ಮಾನ್ಯ ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ ಜೋಯಿಡಾ ಇವರಿಗೆ ಮಾಹಿತಿಗಾಗಿ, ಗೌರವಪೂರ್ವಕವಾಗಿ ಸಲ್ಲಿಸಿದೆ

ದಿನಾಂಕ : 05/03/2021 ರಂದು ಪಶು ಚಿಕಿತ್ಸಾಲಯ, ರಾಮನಗರದಲ್ಲಿ ಸರಬರಾಜು ಮಾಡಲಾಗಿದ್ದ 2019-20 ನೇ ಸಾಲಿನ (ಪಿಸಿಪಿ) ಕೋಳಿ ಮರಿಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದ್ದ

- ಇವನ್ನು ಫಲಾನುಭವಿಗಳಿಗೆ ಮರುಪಾವತಿ ಮಾಡಿರುವ ಬಗ್ಗೆ

ಸ್ವೀಕೃತಿ ಪತ್ರ.

ಕ್ರ.ಸಂ.	ಫಲಾನುಭವಿಯ ಹೆಸರು	ಮರುಪಾವತಿಸಿದಂದ ಹಣದ ಮೊತ್ತ	ಫಲಾನುಭವಿಯ ಸಹಿ
01	ಮಂಗಲಾ ಹನುಮಂತ ದೇಸಾಯಿ	ರೂ ಒಂದು ಸಾವಿರ / ₹ 1.000/-	Sosal
02.	ದೀಪಾ ದತ್ತಾತ್ರಯ ದೇಸಾಯಿ	ರೂ ಒಂದು ಸಾವಿರ / ₹ 1,000/-	[illegible]
[illegible]	ಜಯಾ ಚಂದ್ರಶೇಖರ ಭಾವಿಕಟ್ಟಿ	ರೂ ಒಂದು ಸಾವಿರ / ₹ 1.000/-	Jaya
	ಲಕ್ಷ್ಮೀ ಕೃಷ್ಣಾ ದೇಸಾಯಿ	ರೂ ಒಂದು ಸಾವಿರ / ₹ 1.000/-	Laxmi
[illegible]	ಪವಿತ್ರಾ ಮಾರುತಿ ಕೋಳಗಿಹಳ್ಳಿ	ರೂ ಐದು ನೂರು / ₹ 5.00/-	[illegible]
06.	ರೂಪಾ ಪದ್ಮಾಕರ ದೇಸಾಯಿ	ರೂ. ಒಂದು ಸಾವಿರ / ₹ 1.000/-	Rupa
07.	ನಿರ್ಮಲಾ ಕುಮಾರ ಭಜಂತ್ರಿ	ರೂ. ಒಂದು ಸಾವಿರ ಐದು ನೂರು / ₹ 1.500/-	[illegible]
08.	ಪವಿತ್ರಾ ಪ್ರಸಾದ [illegible]	ರೂ ಒಂದು ಸಾವಿರ / ₹ 1 000/-	Pavitra
09	ಮಹಾದೇವಿ ಮಾರುತಿ ನಾಗಣ್ಣವರ	ರೂ ಒಂದು ಸಾವಿರ / ₹ 1.000/-	ಮಹಾದೇವಿ
10.	[illegible] ಪಾಟೀಲ	ರೂ. ಒಂದು ಸಾವಿರ / ₹ 1.000/-	Pooja
11.	ಸಲೀಂ [illegible]	ರೂ ಒಂದು ಸಾವಿರ / ₹ 1.000/-	[illegible]
12	ರಾಜು [illegible]	ರೂ ಒಂದು ಸಾವಿರ / ₹ 1.000/-	[illegible]
13.	ಕುಮಾರ ಸಾವಂತ	ರೂ ಐದು ನೂರು / ₹ 5.00/-	[illegible]
14.	ಶ್ರೀಧರ [illegible]	ರೂ. ಒಂದು ಸಾವಿರ / ₹ 1.000/-	[illegible]
15	ಓಂಕಾರ ರಾಮು ಪಾಟೀಲ	ರೂ ಒಂದು ಸಾವಿರ / ₹ 1.000/-	[illegible]
16	ಶೋಭಾ [illegible]	ರೂ ಒಂದು ಸಾವಿರ / ₹ 1.000/-	[illegible]
17	[illegible]	ರೂ. ಒಂದು ಸಾವಿರ / ₹ 1.000/-	[illegible]
18	[illegible]	ರೂ ಒಂದು ಸಾವಿರ / ₹ 1.000/-	[illegible]
19	ಶ್ರೀಕಾಂತ ದೇಸಾಯಿ	ರೂ ಎರಡು ಸಾವಿರ / ₹ 2.000/-	[illegible]
20	[illegible]	ರೂ. ಐದು ನೂರು / ₹ 500/-	[illegible]
		ಒಟ್ಟು ರೂ. ₹ 20.000/-	

ಪಶು ವೈದ್ಯಾಧಿಕಾರಿ [illegible]
ಪಶು ಆಸ್ಪತ್ರೆ [illegible]
[illegible] (ತಾ) [illegible]